## ಸನ್ನಿಯ 'ಜಾಕ್‌ಪಾಟ್'

'ಜಿಸ್ಮ್ 2' ಚಿತ್ರದ ಮೂಲಕ ಬಾಲಿವುಡ್‌ಗೆ ಅಡಿಯಿಟ್ಟು ಪಡ್ಡೆ ಹೈಕಳ ನಿದ್ದೆಗೆಡಿಸಿದ ನೀಲಿ ಚಿತ್ರತಾರೆ ಸನ್ನಿ ಲಿಯೋನ್ ಈಗ ಬಿಡುವಿಲ್ಲದ ತಾರೆ. 'ಬೂಮ್' ಎಂಬ ವಯಸ್ಕರ ಚಿತ್ರದ ಮೂಲಕ ಹೆಸರು ಗಳಿಸಿದ ಕೈಜಾದ್ ಗುಸ್ತಾದ್ ನಿರ್ದೇಶನದ 'ಜಾಕ್‌ಪಾಟ್' ಚಿತ್ರದಲ್ಲಿಯೂ ಸನ್ನಿ ಪ್ರಮುಖ ಪಾತ್ರದಲ್ಲಿ ಮಿಂಚಲಿದ್ದಾರಂತೆ. ಅವರದು ಬಂದು ಹೋಗುವ ಪಾತ್ರವಲ್ಲ, ಬದಲಾಗಿ ಚಿತ್ರ ಕಥನದಲ್ಲಿ ನಡೆಯುವ ಘಟನಾವಳಿಗಳ ಸೂತ್ರಧಾರಿಣಿಯೇ ಸನ್ನಿಯಂತೆ. ಸನ್ನಿ ಲಿಯೋನ್ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದರೆ ಆ ಪಾತ್ರವನ್ನು ಅವರ 'ಖ್ಯಾತಿ'ಗೆ ವಿರುದ್ಧವಾಗಿ ಸೃಷ್ಟಿಸಲು ಸಾಧ್ಯವಿಲ್ಲ ಎನ್ನುವುದು ನಿರ್ದೇಶಕ ಗುಸ್ತಾದ್ ಮಾತು. ಇದರರ್ಥ ಸನ್ನಿ 'ಜಿಸ್ಮ್'ಗಿಂತಲೂ ಹೆಚ್ಚು ಬಿಸಿಬಿಸಿಯಾಗಿ ತೆರೆದುಕೊಳ್ಳಲಿದ್ದಾರೆ.

ಗುಸ್ತಾದ್ ವಯಸ್ಕರ ಚಿತ್ರಗಳಿಗೆ ಹೆಸರಾದವರು. ಈಗ ಬಿಕಿನಿ ಒಲ್ಲೆ ಎನ್ನುತ್ತಿರುವ ಕತ್ರೀನಾ ಕೈಫ್ ಇದೇ 'ಬೂಮ್' ಚಿತ್ರದ ದೃಶ್ಯಗಳಲ್ಲಿ ಹಸಿ ಬಿಸಿಯಾಗಿ ಕಾಣಿಸಿಕೊಳ್ಳುವ ಮೂಲಕವೇ ಬಾಲಿವುಡ್ ನೆಲದಲ್ಲಿ ಪಾದವೂರಿದ್ದು ಎನ್ನುವುದನ್ನು ಮರೆಯುವಂತಿಲ್ಲ. ಸನ್ನಿಯ ಬದ್ಧತೆ ಮತ್ತು ಪರಿಶ್ರಮವನ್ನು ಗುಸ್ತಾದ್ ಮೆಚ್ಚಿಕೊಂಡಿದ್ದಾರೆ. ಗೋವಾದಲ್ಲಿ ತಳವೂರಿರುವ ಜಾಕ್‌ಪಾಟ್ ಚಿತ್ರತಂಡದಲ್ಲಿ ನಸೀರುದ್ದೀನ್ ಷಾ ಮತ್ತು ಸಚಿನ್ ಜೋಶಿ ಸಹ ಇದ್ದಾರೆ. ತಮಿಳಿನ ನಟ ಭರತ್ ಬಾಲಿವುಡ್‌ಗೆ ಪರಿಚಯವಾಗುತ್ತಿದ್ದಾರೆ.



## ಚೋಪ್ರಾ ಸೋದರಿಯರ ನಡುವೆ ಟೂ?

ಚಿತ್ರರಂಗದಲ್ಲಿ ನನಗೆ ಅಕ್ಕನೇ ಎಲ್ಲಾ ಎಂದು ಬಣ್ಣದಹಚ್ಚಿದ ಆರಂಭದ ದಿನಗಳಲ್ಲಿ ಪದೇ ಪದೇ ಹೇಳುತ್ತಿದ್ದವರು ಪರಿಣೀತಿ ಚೋಪ್ರಾ. ತಂಗಿಗೆ ಬಿ–ಟೌನಿನ ಗಾಸಿಪ್‌ಗಳ ಕುರಿತು ಎಚ್ಚರಿಕೆ ಮತ್ತು ಸೂಕ್ಷ್ಮಗಳನ್ನು ಕಲಿಸಿಕೊಟ್ಟಿದ್ದವರು ಪ್ರಿಯಾಂಕಾ ಚೋಪ್ರಾ. ಎರಡು ದೇಹ ಒಂದೇ ಮನಸ್ಸು ಎಂಬಂತಿದ್ದ ಈ ಅಕ್ಕತಂಗಿಯರು ಈಗ ಗಾಸಿಪ್ 'ಕಾರ್ಖಾನೆ'ಯಾಗಿ ಬದಲಾಗಿದ್ದಾರೆ. ಇಬ್ಬರ ಬಾಂಧವ್ಯ ಮೊದಲಿನಂತೆ ಇಲ್ಲ ಎನ್ನುವುದು ಸದ್ಯದ ಗಾಳಿಸುದ್ದಿ.

ಇಂಥದ್ದೊಂದು ಗಾಳಿಸುದ್ದಿ ದಟ್ಟವಾಗಲು ಕಾರಣ ಇಬ್ಬರ ಸಿನಿಮಾಗಳೂ ಒಂದೇ ದಿನ ತೆರೆ ಕಾಣುತ್ತಿರುವುದು. ಪ್ರಿಯಾಂಕಾ ಚೋಪ್ರಾ ನಟಿಸಿರುವ 'ಜಂಜೀರ್ 2' ಮತ್ತು ಪರಿಣೀತಿಯ 'ಶುದ್ಧ್ ದೇಸಿ ರೊಮ್ಯಾನ್ಸ್' ಈ ವಾರ ಪರಸ್ಪರ ಪೈಪೋಟಿಗಿಳಿದಿವೆ. ಇದಕ್ಕೆ ಪೂರಕವಾಗಿ 'ಝಲಕ್ ದಿಕ್ಲಾ ಜಾ' ಕಿರುತೆರೆ ಕಾರ್ಯಕ್ರಮದಲ್ಲಿ ಹಾಜರಿದ್ದ ಇಬ್ಬರೂ ಜಿದ್ದಿಗೆ ಬಿದ್ದವರಂತೆ ತಮ್ಮ ಸಿನಿಮಾಗಳ ಪ್ರಚಾರದಲ್ಲಿ ತೊಡಗಿದ್ದರು. ಅಕ್ಕನಿಗೆ ತಂಗಿ ಹಾಕಿರುವ ಸವಾಲಿನಲ್ಲಿ ಗೆಲ್ಲುವುದು ಯಾರು ಎಂಬುದು ಇದೇ ವಾರ ಗೊತ್ತಾಗಲಿದೆ.

■ ಅಮಿ

